ಕರ್ನಾಟಕ ವಿಧಾನ ಸಭೆ

321 ಶ್ರೀ ಪ್ರತಾಪಗೌಡ ಪಾಟೀಲ (ಮಸ್ಕಿ)
ಜಲಸಂಪನ್ಮೂಲ ಸಚಿವರು.

ಅ) ತುಂಗಭದ್ರಾ ಕಾಲುವೆಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರು ಕೆಲಸ ಮಾಡುತ್ತಿದ್ದು (ನೀರಗಂಟಿ ಗ್ಯಾಂಗ್‌ಮನ್) ನೀರು ನಿರ್ವಹಣೆಗೆ ಸಹಕಾರಿಯಾಗಿರುತ್ತದೆ. ಆದರೆ ಇವರ ವೇತನವನ್ನು ವರ್ಷಕ್ಕೆ 2 ಅಥವಾ 3 ಬಾರಿ ಮಾತ್ರ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ತುಂಗಭದ್ರಾ ಯೋಜನೆಯಡಿಯಲ್ಲಿ ಅಚ್ಚುಕಟ್ಟು ಪ್ರದೇಶಕ್ಕೆ ಸಮರ್ಪಕ ನೀರು ನಿರ್ವಹಣೆ ಮಾಡಲು ಹೊರ ಗುತ್ತಿಗೆ ಆಧಾರದ ಮೇಲೆ ಗುತ್ತಿಗೆದಾರರಿಗೆ ವಹಿಸಲಾಗಿದೆ. ಈ ಗುತ್ತಿಗೆದಾರರುಗಳು ನೀರು ನಿರ್ವಹಣೆಗಾಗಿ ತಾತ್ಕಾಲಿಕವಾಗಿ ಸೌಡಿ ಹಾಗೂ ನೀರುಗಂಟಿಗಳನ್ನು ನೇಮಿಸಿಕೊಂಡಿರುತ್ತಾರೆ. ನೀರು ನಿರ್ವಹಣೆ ಬಿಲ್ಲುಗಳನ್ನು ಗುತ್ತಿಗೆದಾರರು ಸಲ್ಲಿಸಿದ ನಂತರ ಸರ್ಕಾರವು ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುತ್ತದೆ. ಆದುದರಿಂದ ಟಾಸ್ಕ್‌ವರ್ಕ್ ಕೂಲಿಗಳಿಗೆ ವೇತನ ಪಾವತಿ ಮಾಡುವುದು ಗುತ್ತಿಗೆದಾರರ ವ್ಯಾಪ್ತಿಗೊಳಪಟ್ಟಿದೆ. ಈ ವಿಷಯವು ಸರ್ಕಾರದ ವ್ಯಾಪ್ತಿಯಲ್ಲಿ ಇರುವುದಿಲ್ಲ.

ಆ) ಬಂದಿದ್ದಲ್ಲಿ, ದಿನಗೂಲಿ ನೌಕರರ ಜೀವನ ನಿರ್ವಹಣೆ ಕಷ್ಟವಾಗಿದ್ದು ಇವರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಉದ್ಭವಿಸುವುದಿಲ್ಲ.

ಇ) ದಿನಗೂಲಿ ಕೆಲಸವನ್ನು (N.R.E.G.) ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಸೇರಿಸಿಕೊಂಡಲ್ಲಿ ಪ್ರತಿ ತಿಂಗಳು ದಿನಗೂಲಿ ನೌಕರರಿಗೆ ವೇತನ ದೊರೆಯುವುದರ ಜೊತೆಗೆ ಜಲಸಂಪನ್ಮೂಲ ಇಲಾಖೆಗೂ ನೀರು ನಿರ್ವಹಣೆ ಹಣ ಉಳಿತಾಯವಾಗುವುದರಿಂದ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ?

ನೀರು ನಿರ್ವಹಣೆ ಕಾರ್ಯವನ್ನು ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ತೆಗೆದುಕೊಳ್ಳಲು ಪರಿಗಣಿಸಲಾಗುವುದು.

ಕರ್ನಾಟಕ ವಿಧಾನ ಸಭೆ

315 ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ
ಕಂದಾಯ ಸಚಿವರು.

ಅ) ಕಂದಾಯ ಇಲಾಖೆಯ ಪೋಡುಗಳ ದರಖಾಸ್ತು ತೊಂದರೆ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ;

ಈ ನಿಟ್ಟಿನಲ್ಲಿ ವಿಶೇಷ ಗಮನಹರಿಸಲಾಗಿದೆ.

ಆ) ಹಾಗಿದ್ದಲ್ಲಿ, ಸರ್ವೆ ಇಲಾಖೆಯಿಂದ ರೈತರಿಗಾಗುತ್ತಿರುವ ತೊಂದರೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ರಾಜ್ಯಾದ್ಯಂತ ಪ್ರಥಮ ಹಂತವಾಗಿ ಒಟ್ಟು 71 ತಾಲ್ಲೂಕುಗಳಲ್ಲಿ ಸರ್ಕಾರಿ ಜಮೀನಿನ ಅಳತೆ ಹಾಗೂ ಬಾಕಿ ಇರುವ ದರಖಾಸ್ತು ಕಡತಗಳ ವಿಲೇವಾರಿ ಎಂಬ ವಿಶೇಷ ಆಂದೋಲನವನ್ನು ಪ್ರಾರಂಭಿಸಲಾಗಿದೆ.

ಇ) ಸರ್ವೆ ನಂಬರುಗಳ ಪೋಡುಗಳ ದರಖಾಸ್ತು ಬಗ್ಗೆ ಅರ್ಜಿದಾರರಿಗೆ ಸೂಕ್ತ ಕ್ರಮ ಕೈಗೊಂಡಿರುವ ಮಾಹಿತಿಗಳನ್ನು ಹಿಂಬಾಲಿಕಾ ಕ್ರಮದಲ್ಲಿ ನೀಡಲಾಗುತ್ತಿದೆಯೇ;

ದರಖಾಸ್ತು ಪೋಡಿ ವಿಶೇಷ ಆಂದೋಲನದಲ್ಲಿ ಸಂಬಂಧಪಟ್ಟ ಎಲ್ಲಾ ಅರ್ಜಿದಾರರಿಗೆ ಸೂಕ್ತ ಮಾಹಿತಿ ನೀಡಿಯೇ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ರೈತರು ಅರ್ಜಿ ನೀಡಿ 2 ವರ್ಷಗಳಾದರೂ ಕ್ರಮ ಕೈಗೊಂಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಆಡಳಿತಾತ್ಮಕ ಕ್ರಮಗಳೇನು;

–ಹೌದು–

ಇಲಾಖೆಯು ದರಖಾಸ್ತು ಆಂದೋಲನ ಹಮ್ಮಿಕೊಂಡಿದ್ದು, ಇದರಲ್ಲಿ ಇಲಾಖಾ ಭೂಮಾಪಕರ ಸೇವೆಯೊಂದಿಗೆ ತ್ವರಿತ ವಿಲೇವಾರಿಗಾಗಿ ಪರವಾನಗಿ ಭೂಮಾಪಕರ ಸೇವೆಯನ್ನು ಸಹ ಬಳಸಿಕೊಳ್ಳಲಾಗುತ್ತಿದೆ.

ಉ) ರೈತರ ಅರ್ಜಿಗಳ ಬಗ್ಗೆ ಕ್ರಮ ಕೈಗೊಂಡು ಅರ್ಜಿಗಳನ್ನು ವಿಲೇವಾರಿಗೊಳಿಸಲು ಕಾಲಾವಧಿಯನ್ನೇನಾದರೂ ನಿಗದಿಗೊಳಿಸಿದೆಯೇ?

ಇಲ್ಲ.

ಕರ್ನಾಟಕ ವಿಧಾನ ಸಭೆ

346 ಶ್ರೀ ಹೆಚ್.ಡಿ.ರೇವಣ್ಣ

ಅ) ಯಗಚಿ ಯೋಜನೆಯಡಿಯಲ್ಲಿ 60.54 ಕಿ.ಮೀಟರ್‌ನಿಂದ 63.16 ಕಿ.ಮೀಟರ್ ವರೆಗೆ (2.62 ಕಿ.ಮೀಟರ್) ಮೇಲ್ಗಾಲುವೆ ನಿರ್ಮಾಣಕ್ಕಾಗಿ ಯಾವ ವರ್ಷದಲ್ಲಿ ಟೆಂಡರ್ ಕರೆಯಲಾಗಿದೆ?

ಯಗಚಿ ಯೋಜನೆಯ 60.54 ಕಿ.ಮೀ ನಿಂದ 63.16 ಕಿ.ಮೀ ವರೆಗಿನ ಮೇಲ್ಗಾಲುವೆ ನಿರ್ಮಾಣಕ್ಕಾಗಿ ಟೆಂಡರ್ ಅನ್ನು 1998–99 ರಲ್ಲಿ (ದಿನಾಂಕ:05–06–1998) ಆಹ್ವಾನಿಸಲಾಗಿರುತ್ತದೆ.

ಆ) ಈ ಕಾಮಗಾರಿಯ ಅಂದಾಜು ಮೊತ್ತವೆಷ್ಟು? ಕಾಮಗಾರಿ ಮುಕ್ತಾಯಗೊಳಿಸಲು ನಿಗದಿಪಡಿಸಿದ ಅವಧಿ ಎಷ್ಟು?

ಈ ಕಾಮಗಾರಿಯ ಅಂದಾಜು ಮೊತ್ತ ರೂ.14.70 ಕೋಟಿಗಳು. ಕಾಮಗಾರಿ ಮುಕ್ತಾಯಗೊಳಿಸಲು ನಿಗದಿಪಡಿಸಿದ ಅವಧಿ 18 ತಿಂಗಳು.

ಇ) ಮುಕ್ತಾಯಗೊಳಿಸಲು ನಿಗದಿಪಡಿಸಿದ ಅವಧಿ ಮೀರಿದೆಯೇ? ಹಾಗಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು?

ಮುಕ್ತಾಯಪಡಿಸಲು ನಿಗದಿಪಡಿಸಿದ ಅವಧಿ ಮೀರಿದೆ.